# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್. ಎಲ್. ಭೋಜೇಗೌಡ. (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 310 |
| ಉತ್ತರಿಸಬೇಕಾದ ದಿನಾಂಕ | : | 14.09.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪಶು ಆಸ್ಪತ್ರೆಗಳು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಈ ಸಾಲಿನಲ್ಲಿ ಸರ್ಕಾರದಿಂದ ಎಷ್ಟು ಆಸ್ಪತ್ರೆಗಳ ಕಟ್ಟಡ ಅಭಿವೃದ್ಧಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದ ಪಶು ಆಸ್ಪತ್ರೆಗಳು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಸದರಿ ಕಾಮಗಾರಿಗಳನ್ನು ನಿರ್ವಹಿಸಲು ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆ:2403-00-101-0-28 (ಕಟ್ಟಡಗಳ ನಿರ್ವಹಣೆ) ಅಡಿಯಲ್ಲಿ ರೂ.22.25 ಕೋಟಿ ಅನುದಾನ ನಿಗದಿಯಾಗಿದ್ದು, ಜಿಲ್ಲಾವಾರು ಅನುದಾನದ ವಿವರ ಅನುಬಂಧದಲ್ಲಿ ನೀಡಲಾಗಿದೆ.<br><br>ಜಿಲ್ಲಾ ಪಂಚಾಯತ್‌ಗಳಲ್ಲಿ ಕ್ರಿಯಾ ಯೋಜನೆ ಅನುಮೋದನೆಯಾಗುವ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ. ಕಾಮಗಾರಿಗಳ ವಿವರವು ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ. |
| ಆ) | ರಾಜ್ಯದ ಪಶು ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸಲು ವೈದ್ಯಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ) | ಬಂದಿದ್ದಲ್ಲಿ, ಈ ಸಿಬ್ಬಂದಿಯನ್ನು ಯಾವ ಸಾಲಿನಲ್ಲಿ ಭರ್ತಿ ಮಾಡಲಾಗುವುದು? | ಪ್ರಸ್ತುತ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಹಾಗೂ 250 ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು KEA ರವರ ಮುಖಾಂತರ ಅಧಿಸೂಚನೆಯನ್ನು ಹೊರಡಿಸಲು ಕ್ರಮವಹಿಸಲಾಗುತ್ತಿದೆ.<br><br>ಕಲ್ಯಾಣ ಕರ್ನಾಟಕ ಪ್ರಾದೇಶಿಕ ವೃಂದಕ್ಕೆ ಸಂಬಂಧಿಸಿದಂತೆ ಅನುಚ್ಛೇದ 371 (ಜೆ) ರಡಿ ಕಿರಿಯ ಪಶುವೈದ್ಯಕೀಯ ಪರೀಕ್ಷಕರ 79 ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ:16.05.2022 ರಂದು ಹಾಗೂ ಪಶುವೈದ್ಯಕೀಯ ಪರೀಕ್ಷಕರ 32 ಅರ್ಹ ಅಭ್ಯರ್ಥಿಗಳ |

| | | |
|---|---|---|
| | | ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ:13.07.2022 ರಂದು ಪ್ರಕಟಿಸಿ ಸಿಂಧುತ್ವ ಹಾಗೂ ಪೋಲಿಸ್ ಪರಿಶೀಲನಾ ವರದಿಗಳನ್ನು ಸಲ್ಲಿಸುವಂತೆ ಕೋರಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಗೆ ಪತ್ರ ಬರೆಯಲಾಗಿರುತ್ತದೆ. ಸದರಿ ವರದಿಗಳು ಸ್ವೀಕೃತಗೊಂಡ ಕೂಡಲೇ ನೇಮಕಾತಿ ಆದೇಶ ನೀಡಲು ಕ್ರಮವಹಿಸಲಾಗುವುದು. |

**ಇ- ಪಸಂಮೀ 198 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

# ಅನುಬಂಧ-1

| ಲೆಕ್ಕ ಶೀರ್ಷಿಕೆ:2403-00-101-0-28 ಕಟ್ಟಡಗಳ ನಿರ್ವಹಣೆ | | | |
|---|---|---|---|
| ಕ್ರ. ಸಂ. | ಜಿಲ್ಲೆಗಳು | ಕ್ರಿಯಾ ಯೋಜನೆಯಲ್ಲಿ ನಿಗದಿಯಾದ ಅನುದಾನ (ರೂ. ಲಕ್ಷಗಳಲ್ಲಿ) | ಷರಾ |
| 1 | ಬೆಂಗಳೂರು ನಗರ | 60.00 | |
| 2 | ಬೆಂಗಳೂರು ಗ್ರಾಮಾಂತರ | 45.00 | |
| 3 | ಚಿಕ್ಕಬಳ್ಳಾಪುರ | 70.00 | |
| 4 | ಚಿತ್ರದುರ್ಗ | 80.00 | |
| 5 | ದಾವಣಗೆರೆ | 63.56 | |
| 6 | ಕೋಲಾರ | 60.00 | |
| 7 | ರಾಮನಗರ | 100.00 | |
| 8 | ತುಮಕೂರು | 138.00 | |
| 9 | ಶಿವಮೊಗ್ಗ | 62.00 | |
| 10 | ಮೈಸೂರು | 127.50 | |
| 11 | ಚಾಮರಾಜನಗರ | 155.00 | |
| 12 | ಚಿಕ್ಕಮಗಳೂರು | 60.00 | |
| 13 | ದಕ್ಷಿಣ ಕನ್ನಡ | 150.00 | |
| 14 | ಹಾಸನ | 90.00 | |
| 15 | ಕೊಡಗು | 50.00 | |
| 16 | ಮಂಡ್ಯ | 75.00 | |
| 17 | ಉಡುಪಿ | 35.00 | |
| 18 | ಬೆಳಗಾವಿ | 125.00 | |
| 19 | ಬಾಗಲಕೋಟೆ | 60.00 | |
| 20 | ವಿಜಯಪುರ | 55.00 | |
| 21 | ಧಾರವಾಡ | 90.00 | |
| 22 | ಗದಗ | 30.00 | |
| 23 | ಹಾವೇರಿ | 85.00 | |
| 24 | ಉತ್ತರ ಕನ್ನಡ | 75.00 | |
| 25 | ಕಲಬುರ್ಗಿ | 75.00 | |
| 26 | ಬಳ್ಳಾರಿ | 22.00 | |
| 27 | ಬೀದರ್ | 35.00 | |
| 28 | ಕೊಪ್ಪಳ | 40.00 | |
| 29 | ರಾಯಚೂರು | 48.00 | |
| 30 | ಯಾಧಗಿರಿ | 30.00 | |
| 31 | ವಿಜಯನಗರ | 34.10 | |
| ಒಟ್ಟು | | **2225.16** | |